ಭೇಟಿಯಾಗಿದ್ದೆ. ಈ ಚಳವಳಿ ಸಮಾಜದ ವಿವಿಧ ಹಂತಗಳನ್ನು ಒಳಗೊಂಡಿತ್ತು. ಭೂಮಿ, ಶ್ರಮ, ಬಂಧನ, ಉದ್ಯೋಗ, ಲಿಂಗ ಕಾರ್ಮಿಕ ವಿಭಜನೆ, ವಸತಿ; ಭಾಗವಹಿಸುವಿಕೆ, ಪ್ರಾತಿನಿಧ್ಯ, ಮೀಸಲಾತಿ, ಕಾನೂನು ಮತ್ತು ಸಾರ್ವಜನಿಕ ಸಂಸ್ಥೆಗಳ ವ್ಯಾಪ್ತಿಯ ರಾಜಕೀಯ ಕಾಳಜಿಗಳು; ಮತ್ತು ಅಸ್ಪೃಶ್ಯತೆ, ಅವಮಾನ ಮತ್ತು ಹೊರಗಿಡುವಿಕೆ, ವಂಚಿತತೆ, ಸ್ವಾಭಿಮಾನ ನಿರಾಕರಣೆ, ಸಾಮಾಜಿಕ ದೌರ್ಜನ್ಯಗಳು, ಅಸ್ಪೃಶ್ಯತಾ ಪದ್ಧತಿಗಳ ಶಬ್ದಾರ್ಥದ ಮರುಉತ್ಪಾದನೆ; ಲಿಂಗವನ್ನು ಗುರಿಯಾಗಿರಿಸಿಕೊಂಡು ನಡೆಯುವ ಗುಲಾಮಗಿರಿಯ ಸಾಮಾಜಿಕ ಅಭ್ಯಾಸಗಳು, ರಾಜಕೀಯ ಮತ್ತು ಅಧಿಕಾರಶಾಹಿ ನಿರಾಸಕ್ತಿ, ಮತ ಧರ್ಮವನ್ನೊಳಗೊಂಡಂತೆ ಜೀವನದ ವಿವಿಧ ಹಂತಗಳಲ್ಲಿ ತಾರತಮ್ಯ – ಮತ್ತು ಸಮಾಜದ ಉಳಿದವರು 1/5ರಷ್ಟು ಮಾನವ ಸಮುದಾಯವನ್ನು ಅವರು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದನ್ನು ಸ್ವತಃ ನೋಡಬೇಕೆಂದು ಕರೆ ನೀಡಿದರು. ಈ ಚಳವಳಿ ಒಂದು ವಿಶಿಷ್ಟವಾದ ಸಾಹಿತ್ಯಿಕ ಸಂವೇದನೆಯ ಅರಳುವಿಕೆಯ ಜೊತೆಗೆ ನಡೆಯಿತು, ಅದು ಒಮ್ಮೆಗೆ, ಸಾಹಿತ್ಯಿಕ ಮಾನದಂಡಗಳು ಮತ್ತು ಸೂಕ್ಷ್ಮತೆಯ ಚಾಲ್ತಿಯಲ್ಲಿರುವ ನಿಯಮಗಳನ್ನು ಬದಿಗೆ ತಳ್ಳಿತು. 20 ವರ್ಷಗಳ ಕಾಲ ದಲಿತ ಸಂಘರ್ಷ ಸಮಿತಿಯು ರಾಜ್ಯದಲ್ಲಿ ನಿಜವಾದ ವಿರೋಧ ಪಕ್ಷವಾಗಿತ್ತು ಮತ್ತು ರಾಜ್ಯದ ರಾಜಕೀಯ ನಾಯಕತ್ವವು ಅದರ ದಾಳಿಗೆ ಹೆದರಿ ಆಶ್ರಯ ಪಡೆಯಲು ಓಡಿತು ಎಂದು ನಾನು ಒಂದೆಡೆ ಬರೆದಿದ್ದೇನೆ.



ದುರದೃಷ್ಟವಶಾತ್, ಈ ಚಳವಳಿಯ ಬಗ್ಗೆ ಇಂಗ್ಲಿಷ್‌ನಲ್ಲಿ ಇರುವ ವಿದ್ವತ್ಪೂರ್ಣ ಅಧ್ಯಯನಗಳು ಕಡಿಮೆ ಎಂಬ ನಿಮ್ಮ ಮಾತಿಗೆ ನನ್ನ ಸಹಮತವಿದೆ. ಮಹಾರಾಷ್ಟ್ರದಲ್ಲಿ 'ದಲಿತ ಪ್ಯಾಂಥರ್' ಚಳವಳಿಯೊಂದಿಗೆ ಚಿತ್ರಿಸಲಾದ ಸಮಾನಾಂತರಗಳು ಯಾವುದೇ ಮಟ್ಟಿಗೆ ಸಮರ್ಥನೀಯವೆಂದು ನಾನು ಭಾವಿಸುವುದಿಲ್ಲ. ಅಂಬೇಡ್ಕರ್‌ರವರ ಕೃತಿಗಳನ್ನು ಹೊರತುಪಡಿಸಿ, ಮಹಾರಾಷ್ಟ್ರದಲ್ಲಿನ 'ದಲಿತ ಪ್ಯಾಂಥರ್' ಚಳವಳಿಯ ನುಡಿಗಟ್ಟು ಮಾರ್ಕ್ಸ್‌ವಾದ, ಬೌದ್ಧಮತ ಮತ್ತು ನಗರ ಜೀವನದ ಅಂಚಿನಲ್ಲಿ ವಾಸಿಸುವವರ ಸಮಸ್ಯೆಗಳಿಂದ ತುಂಬಿತ್ತು. ಆದರೆ, ಡಿಎಸ್‌ಎಸ್ ಪೂರ್ಣ ವ್ಯಾಪ್ತಿಯ ವ್ಯವಹಾರಗಳನ್ನು, ವಿಶೇಷವಾಗಿ ಕೃಷಿಕರನ್ನು ಗುರಿಯಾಗಿಸಿಕೊಂಡು, ಅವುಗಳೆಲ್ಲವನ್ನು ಒಳಗೊಳ್ಳಲು ಪ್ರಯತ್ನಿಸಿತು. ಅದರ ಕಾರ್ಯಸೂಚಿ ಹೇರಳವಾಗಿತ್ತು ಮತ್ತು ಒಂದು ಪ್ರದೇಶಕ್ಕೆ ಸೀಮಿತವಾಗಿರಲಿಲ್ಲ. ಡಿಎಸ್‌ಎಸ್ ಅನ್ನು ವಿಮರ್ಶಾತ್ಮಕವಾಗಿ ನೋಡುವ ಅನೇಕ ಬರಹಗಳನ್ನು ನಾನು ನೋಡಿಲ್ಲದಿರಬಹುದು ಎಂಬ ಮಾತನ್ನು ನಾನಿಲ್ಲಿ ಹೇಳಲೇಬೇಕು. ಆದಾಗ್ಯೂ, ಬೃಹತ್ ಜನಬೆಂಬಲವನ್ನು ಪಡೆದ ಚಳವಳಿ 1990ರ ದಶಕದಲ್ಲಿ ಕುಸಿಯಿತು ಎಂದು ನನಗೆ ತೋರುತ್ತದೆ ಮತ್ತು ಅದಕ್ಕೆ ಕಾರಣಗಳನ್ನು ಸಮರ್ಪಕವಾಗಿ ಅನ್ವೇಷಿಸಲಾಗಿಲ್ಲ. ಅವುಗಳಲ್ಲಿ ಕೆಲವನ್ನು ನಾನು ಉಲ್ಲೇಖಿಸುತ್ತೇನೆ:

1. ಡಿಎಸ್‌ಎಸ್ ಅನುಭವ-ಸಮೃದ್ಧ ಮತ್ತು ಪ್ರೇರಣೆ-ಸಮೃದ್ಧವಾಗಿದ್ದರೂ, ಅದು ಸೈದ್ಧಾಂತಿಕ ಸ್ಪಷ್ಟತೆಯ ಕೊರತೆಯನ್ನು ಹೊಂದಿತ್ತು.

2. ಹೆಚ್ಚಿನ ನಾಯಕತ್ವದ ಹಿನ್ನೆಲೆ ಸಂಸ್ಕೃತಿಯು ಮೊದಲು ಗಾಂಧಿಯವರಿಂದ ಹಾಗೂ ನಂತರದಲ್ಲಿ ಕಾನ್ಶಿರಾಮ್‌ರಿಂದ ಭಾಗಶಃವಾಗಿ ಪಡೆದುಕೊಂಡ ಲೋಹಿಯಾ ಚಿಂತನೆಗಳಿಂದ ಪ್ರಭಾವಿತವಾಗಿತ್ತು. ಇಂತಹ ಅನೇಕ ಅಂಶಗಳಿಂದ ಕುಗ್ಗಿದ ಚಳವಳಿಗೆ ಸವಾಲುಗಳ ಭಾರವನ್ನು ಹೊರಲು, ಅದರಲ್ಲೂ ವಿಶೇಷವಾಗಿ ಕುತಂತ್ರಿ ರಾಜಕಾರಣಿಗಳ ಪ್ರಚೋದನೆಗಳನ್ನು ಎದುರಿಸಲು ಸಾಧ್ಯವಾಗಲಿಲ್ಲ.

3. ಡಿಎಸ್‌ಎಸ್, ಅಂಬೇಡ್ಕರ್‌ರವರನ್ನು ಉಲ್ಲೇಖಿಸಿದರೂ, ಅವರ ಬಗ್ಗೆ ಅದರ ತಿಳಿವಳಿಕೆ ಸೀಮಿತವಾಗಿತ್ತು, ಸಮಗ್ರವಾಗಿಲ್ಲ ಎಂದು ನಾನು ಭಾವಿಸುತ್ತೇನೆ.

4. ಡಿಎಸ್‌ಎಸ್, ರಾಜಕೀಯವನ್ನು ಪ್ರಾಥಮಿಕವಾಗಿ 'ಚುನಾವಣಾ ರಾಜಕೀಯ' ಎಂದು ಅರ್ಥಮಾಡಿಕೊಂಡಿದೆ ಎಂದು ನಾನು ಭಾವಿಸುತ್ತೇನೆ. ಸಾಮಾಜಿಕ ಸಂಬಂಧಗಳನ್ನು ಆಮೂಲಾಗ್ರವಾಗಿ ಪರಿಷ್ಕರಿಸುವ ಮತ್ತೊಂದು